

ರೀಪ್' ಎಂದು ಹೇಳಿದ. ಅವ ತರಕಾರಿಯ ಅರ್ಧ ಕ್ರಯ ಮಾತ್ರ ತೆಗೆದುಕೊಂಡು ಉಳಿದದ್ದು ನೀನೇ ಇಟ್ಟುಕೋ ಎನ್ನುತ್ತಿದ್ದ. ಈಗ ಅವಳ ಕೈಯಲ್ಲೂ ಹಣ ಇತ್ತು. ಹಣದ ಲೆಕ್ಕ, ಬೆಲೆ ಕಲಿತಿದ್ದಳು. ತರಕಾರಿ ಮಾರುತ್ತಿದ್ದವನನ್ನು ನೋಡುವುದಕ್ಕೋಸ್ಕರ ಒಮ್ಮೆಯಾದರೂ ಆ ದಾರಿಯಲ್ಲಿ ಹೋಗುತ್ತಿದ್ದಳು. ಮುಂದೆ ಎರಡು ತಿಂಗಳಲ್ಲಿ ಅವ ಅವಳಿಗೆ ಬೇರೊಂದು ಕೆಲಸದ ಆಸೆ ಹುಟ್ಟಿಸಿದ. ಮುಂಬಯಿಯಲ್ಲಿ ಇದರ ಹತ್ತು ಪಟ್ಟು ಸಂಬಳ ಎಂದ. ಖುಷಿಯಿಂದ ಒಪ್ಪಿದಳು. ಆದರೆ ಬಸ್ಸಲ್ಲಾದರೆ ಬರುವುದಿಲ್ಲ ಎಂದಳು. ಇಲ್ಲ ಟ್ರೇನ್ ಎಂದು ವಿವರಿಸಿದ.

ಮನೆಯ ಒಡತಿ ಬೇಜಾರಿಂದ ಒಪ್ಪಿದಳು. ಹೊಸ ಸೂಟ್‌ಕೇಸ್ ತಂದು ಬಟ್ಟೆಗಳನ್ನು ಜೋಡಿಸಿಕೊಟ್ಟು ಬಾಕಿ ಸಂಬಳ ನೀಡಿದಳು. ಜೊತೆಗೆ ಮುಂಬಯಿ ಬಗ್ಗೆ ಎಚ್ಚರಿಕೆಯ ಮಾತುಗಳನ್ನೂ ಆಡಿದಳು. ಹುಡುಗಿ ಹೊರಡುವಾಗ ನಿರೂಪ್ ಗೊಳೊ ಎಂದು ಅತ್ತ. ಇವಳ ಕಣ್ಣುಗಳಿಂದಲೂ ನೀರು ಹರಿಯಿತು.

ಮುಂಬಯಿಯಲ್ಲಿ ಟ್ರೇನ್ ಇಳಿದ ಮೇಲೆ ರೀಪ್ ಜೊತೆ ರಿಕ್ಷಾ ಹತ್ತಿದಳು. ಅದು ಎಲ್ಲೆಲ್ಲೋ ಸುತ್ತಿ ಸುತ್ತಿ ಯಾವುದೋ ಗಲ್ಲಿಯ ಹಳೆಯ ಮುರುಕುಮನೆ ಮುಂದೆ ನಿಂತಿತು. ಅಲ್ಲಿ ಮತ್ತೊಬ್ಬ ಭಯ್ಯಾ ಇದ್ದ. ಅವನೂ ರೀಪ್ ಮಾತುಕತೆ ಆಡಿದರು. ಹುಡುಗಿಯನ್ನು ಹೆಂಗಸೊಬ್ಬಳು ಒಳಗೆ ಕರೆದುಕೊಂಡು ಹೋದಳು. ಅವಳು ಹೊರ ಬಂದಾಗ ರೀಪ್ ಇರಲಿಲ್ಲ. ಮತ್ತೆಂದೂ ಅವನು ಕಾಣ ಸಿಗಲಿಲ್ಲ. ಒಬ್ಬ ದಪ್ಪ ಹೆಂಗಸು ಏನೇನೋ ಹೇಳಿಕೊಡತೊಡಗಿದಳು. ಕೆಲವು ದಿನ ಬೆಳಗಿಂದ ಸಂಜೆವರೆಗೂ ತಿನ್ನುವುದು ಮಾತ್ರ. ವಾಂತಿ ಬರುವಷ್ಟು ಹಾಲು ಕುಡಿಸಿದರು. ಯಾವ ಯಾವದೋ ಮಾತ್ರೆಗಳನ್ನು ತಂದು ಮೂರು ಹೊತ್ತೂ ತಿನ್ನಿಸಿದರು. ಅಲ್ಲಿ ಸುಮಾರು ಹತ್ತು ಹನ್ನೆರಡು ಹುಡುಗಿಯರಿದ್ದರು. ಇವಳಿಗೆ ತಮಾಷೆ ಮಾಡುತ್ತ ಮೈ ಮುಟ್ಟಿ ಚಿವುಟುತ್ತಿದ್ದರು. ಕೊನೆಗೊಮ್ಮೆ ಇವಳನ್ನು ಶೃಂಗಾರ ಮಾಡಿ ಅವರ ಸಾಲಿನಲ್ಲಿ ನಿಲ್ಲಲು ಹೇಳಿದರು. ಬಂದವನೊಬ್ಬ ಇವಳನ್ನು ಆರಿಸಿದ.

ಕೋಲ್ಕೊತ್ತಾ ಬಿಡುವಾಗ ನಿರೂಪ್‌ನನ್ನು ನೋಡಿ ಅತ್ತದ್ದಕ್ಕಿಂತ ಹೆಚ್ಚು ಅತ್ತಳು. ವರ್ಷ ಕಳೆಯುತ್ತಲೇ ಗಿರಾಕಿಯೊಬ್ಬನ ಪರಿಚಯದಿಂದ ಗ್ರ್ಯಾಂಡ್ ಲೀಗಲ್ ಲಾಡ್ಜ್ ಪಕ್ಕದ ಈಗ ಇರುವ ಮನೆಗೆ ಬಂದಳು. ಇಲ್ಲಿ ಅಲ್ಲಿಗಿಂತ ಗಿರಾಕಿ ಕಡಿಮೆ. ಆದರೆ ಸಂಪಾದನೆ ಜಾಸ್ತಿ. ಇಲ್ಲಿ ಎಲ್ಲ ವ್ಯವಹಾರಗಳನ್ನು ಅಕ್ಕನೇ ನೋಡಿಕೊಳ್ಳುವುದು. ಬಂದ ಹಣ ಅವಳ ಕೈಗೇ. ಆದರೆ ಸರಿಯಾಗಿ ಲೆಕ್ಕ ಮಾಡಿ ಅರ್ಧಾಂಶ ನೀಡುತ್ತಾಳೆ.

***

**ಅವಳನ್ನು ಕಾಣುತ್ತಲೇ ರಾಜೇಶನಿಗೆ ಅಪಾರ ಆನಂದವಾಯಿತು. ಮೊದಲು ಆಕೆ ಇಬ್ಬರಿರುವುದಕ್ಕೆ ಆಕ್ಷೇಪಿಸಿದಳು. ಇಬ್ಬರೂ ಪ್ರತ್ಯೇಕ ಪೇ ಮಾಡುವುದಾದರೆ ಓಕೆ ಎಂದಳು. ಇಬ್ಬರೂ ಒಪ್ಪಿದ ಮೇಲೆ ತಲೆಗೆ ಹೊದ್ದ ಶಾಲು ತೆಗೆದಳು.**